# ಭರ್ಜರಿ ಎಂಟ್ರಿ



**ದ**ಕ್ಷಿಣ ಭಾರತದ ಚಿತ್ರರಂಗದಲ್ಲಿ ಅತ್ಯಧಿಕ ಸಂಭಾವನೆ ಪಡೆಯುತ್ತಿರುವ ಸುಂದರಿ ಇಲಿಯಾನಾ ಡಿಕ್ರುಜ್‌ಳ ಬಾಲಿವುಡ್ ಎಂಟ್ರಿ ಇದೀಗ ಭರ್ಜರಿ ಸುದ್ದಿ ಮಾಡುತ್ತಿದೆ. 'ಬರ್ಫಿ' ಚಿತ್ರದಲ್ಲಿ ಈಕೆ ನಿರ್ವಹಿಸಿದ ಎರಡನೆ ಹೀರೋಯಿನ್ ಪಾತ್ರ ಪ್ರೇಕ್ಷಕರಿಂದಲೂ, ವಿಮರ್ಶಕರಿಂದಲೂ ಏಕಪ್ರಕಾರವಾಗಿ ಹೊಗಳಿಕೆಗೆ ಪಾತ್ರವಾಗಿದೆ. ಅದರಲ್ಲೂ ಪ್ರಿಯಾಂಕಾ ಚೋಪ್ರಾಳಂತಹ 'ಬುದ್ಧಿವಂತ ಸುಂದರಿ' ಜತೆಗೆ ಎರಡನೇ ನಾಯಕಿಯ ಪಾತ್ರ ನಿರ್ವಹಿಸಲು ಎದೆಗಾರಿಕೆ ಬೇಕು. ಸಿಕ್ಕಿದ ಅವಕಾಶವನ್ನು ಅತ್ಯಂತ ಯಶಸ್ವಿಯಾಗಿ ಬಳಸಿಕೊಂಡಿರುವ ಇಲಿಯಾನಾ ಇನ್ನು ಮುಂದೆ ತೆಲುಗು, ತಮಿಳು ನಿರ್ಮಾಪಕರಿಗೆ ಇನ್ನಷ್ಟು ತುಟ್ಟಿಯಾಗಬಹುದು.

"ಎಲ್ಲ ಕ್ರೆಡಿಟ್ ಚಿತ್ರದ ನಿರ್ದೇಶಕ ಅನುರಾಗ್ ಬಸು ಅವರಿಗೆ ಸಲ್ಲುತ್ತದೆ" ಎಂದಿದ್ದಾಳೆ ಇಲಿಯಾನಾ. "ಈ ಪಾತ್ರದ ಆಫರ್ ಬಂದಾಗ ಮೊದಲು ಅಷ್ಟು ಖುಷಿಯಾಗಲಿಲ್ಲ. ನಾನೋ ಮಾಡರ್ನ್ ಹುಡುಗಿ. ಚಿತ್ರದಲ್ಲಿ 70ರ ದಶಕದ ಗೃಹಿಣಿಯ ಪಾತ್ರ. ಆದರೆ ನಿರ್ದೇಶಕ ಅನುರಾಗ್ ಬಸು ಇಡೀ ದಿನ ಕುಳಿತು ಪಾತ್ರದ ಬಗ್ಗೆ ವಿವರಿಸಿ ನನ್ನನ್ನು ಒಪ್ಪಿಸಿದರು" ಎನ್ನುವುದು ಆಕೆಯ ಸ್ಪಷ್ಟ ನುಡಿ.

ಮುಂಬೈಯಲ್ಲಿ ಹುಟ್ಟಿ ಗೋವಾದಲ್ಲಿ 10 ವರ್ಷಗಳನ್ನು ಕಳೆದಿರುವ ಇಲಿಯಾನಾ, ದಕ್ಷಿಣ ಭಾರತದ ಐದು ಭಾಷೆಗಳಲ್ಲೂ ನಟಿಸಿ ಆ ಬಳಿಕ ಬಾಲಿವುಡ್‌ಗೆ ಎಂಟ್ರಿ ಕೊಟ್ಟಿರುವುದು ತಮಾಷೆಯಾಗಿದೆ. ಹಾಗೆ ನೋಡಿದರೆ ಈಕೆ ಆರಂಭದಲ್ಲಿ ಮಾಡೆಲಿಂಗ್ ಕ್ಷೇತ್ರ ಪ್ರವೇಶಿಸಿದ್ದೂ ವಿಫಲ ಎಂಟ್ರಿಯೊಂದಿಗೇ. 2003ರಲ್ಲಿ ಜಾಹೀರಾತು ಕ್ಷೇತ್ರದ ಮಾಡೆಲ್ ಆಗಬೇಕೆಂದು ಈಕೆ ತಯಾರಿಸಿದ ಪ್ರೊಫೈಲ್ ನೋಡಿದ ಯಾರೂ ಕರೆಯಲೇ ಇಲ್ಲ! ಒಂದು ವರ್ಷದ ಬಳಿಕ ಮತ್ತೆ ಸುಧಾರಿತ ಪ್ರೊಫೈಲ್ ಕಳಿಸಿದ್ದು ಕ್ಲಿಕ್ ಆಯಿತು. ಫೇರ್ ಅಂಡ್ ಲವ್ಲೀ, ಇಮಾಮಿ ಮುಂತಾದ ಸೂಪರ್ ಬ್ರಾಂಡ್‌ಗಳಿಗೆ ಮಾಡೆಲ್ ಆದ ಈಕೆ ತೆಲುಗು ಚಿತ್ರರಂಗದ ಕಣ್ಣಿಗೆ ಬಿದ್ದಳು. 2006ರಲ್ಲಿ ತೆರೆಗೆ ಬಂದ 'ದೇವದಾಸು' ಚಿತ್ರ ಕ್ಲಿಕ್ ಆಯಿತು. ಪೋಕಿರಿ, ಜಲ್ಸಾ, ಕಿಕ್ ಮತ್ತು ಇತ್ತೀಚೆಗಷ್ಟೇ ತೆರೆ ಕಂಡ ಜುಲಾಯಿ ಚಿತ್ರಗಳು ಕೋಟಿಗಟ್ಟಳೆ ಹಣ ಬಾಚಿದವು. ತಮಿಳಿನಲ್ಲೂ ಈಕೆ ನಟಿಸಿದ 'ಕೇಡಿ' ಮತ್ತು 'ನನ್ಬನ್' ಚಿತ್ರಗಳು ಬಾಕ್ಸಾಫೀಸ್ ದಾಖಲೆ ಬರೆದವು.

ಸದ್ಯಕ್ಕೆ ಬಾಲಿವುಡ್‌ನಲ್ಲಿ ಮೆರೆಯುತ್ತಿರುವ ಕರೀನಾ, ಕತ್ರೀನಾ ಮತ್ತು ಪ್ರಿಯಾಂಕಾ ಮಧ್ಯೆ ಇನ್ನೊಬ್ಬ ನಟಿ 'ಹಾಟ್ ಫೇವರೆಟ್' ಅನ್ನಿಸುವುದು ಸ್ವಲ್ಪ ಕಷ್ಟವೇ. ಆದರೆ ಮುದ್ದು ಮುಖ ಹಾಗೂ ಸೆಕ್ಸೀ ದೇಹ ಎರಡನ್ನೂ ಹೊಂದಿರುವ ಇಲಿಯಾನಾ 'ಬರ್ಫಿ'ಯಷ್ಟೇ ಉತ್ತಮವಾದ ಪಾತ್ರಗಳನ್ನು ಪಡೆದರೆ ಬಾಲಿವುಡ್‌ನ 'ಟಾಪ್ ತ್ರೀ' ಪಟ್ಟಕ್ಕೆ ಏರುವುದು ಕಷ್ಟವೇನಲ್ಲ.

# ಪ್ರತಿಭಾವಂತ ರಣಬೀರ್

"**ನೂ**ರು ಕೋಟಿ ಗಳಿಕೆಯ ಕ್ಲಬ್ ಸೇರಲು ನನಗೂ ಇಷ್ಟ. ನಾನು ಪರದೆಯಲ್ಲಿ ಕಾಣಿಸಿಕೊಂಡ ತಕ್ಷಣ ಪ್ರೇಕ್ಷಕರು ಸಿಳ್ಳೆ ಹೊಡೆದು ಚಿಲ್ಲರೆ ಕಾಸುಗಳನ್ನು ಪರದೆಗೆ ಎಸೆಯಬೇಕು ಎಂದು ನನಗೂ ಆಸೆಯಿದೆ. ಆದರೆ ನಾನು ಶಾರೂಕ್ ಅಥವಾ ಸಲ್ಮಾನ್ ಖಾನ್ ಅಲ್ಲವಲ್ಲ.. ನನ್ನ ಮಿತಿ ಏನು ಅನ್ನುವುದು ನನಗೆ ಗೊತ್ತಿದೆ. ಸೂಪರ್‌ಮ್ಯಾನ್ ಇಮೇಜ್‌ನ ಪಾತ್ರಗಳಲ್ಲಿ ನಟಿಸುವುದು ಸದ್ಯಕ್ಕೆ ಕಷ್ಟ.."

–ಎರಡು ವಾರಗಳ ಹಿಂದೆ ಪ್ರಕಟವಾದ ಸಂದರ್ಶನವೊಂದರಲ್ಲಿ ರಣಬೀರ್ ಕಪೂರ್ ಅತ್ಯಂತ ನೇರವಾಗಿ ಹೇಳಿದ ಮಾತುಗಳಿವು. ಇದೀಗ ಯಶಸ್ವಿಯಾಗಿ ಓಡುತ್ತಿರುವ 'ಬರ್ಫಿ' ಚಿತ್ರ ಭರ್ಜರಿ ಬಾಕ್ಸಾಫೀಸ್ ಗಳಿಕೆ ಕಂಡು ರಣಬೀರನ ಅದೃಷ್ಟವನ್ನೇ ಬದಲಿಸುವಂತೆ ಕಾಣಿಸುತ್ತಿದೆ. ಮೊದಲ ವಾರದಲ್ಲೇ ಬರ್ಫಿ ಚಿತ್ರ 60 ಕೋಟಿ ಗಳಿಸಿದೆ ಎನ್ನುವುದು ಈತನೂ '100 ಕೋಟಿ ಕ್ಲಬ್' ಸೇರುವುದು ಖಚಿತ ಎನ್ನುವ ಸೂಚನೆ ನೀಡಿದೆ.

ಬರ್ಫಿ ಯಲ್ಲಿ ಅತ್ಯುತ್ತಮ ನಟನೆ ನೀಡಿರುವ ರಣಬೀರ್‌ನನ್ನು ಇನ್ನಷ್ಟು ಒಳ್ಳೆಯ ಚಿತ್ರಕಥೆಗಳು ಹುಡುಕಿಕೊಂಡು ಬರುತ್ತಿರುವುದು ಇನ್ನೂ ದೊಡ್ಡ ಸುದ್ದಿ. ನಿರ್ದೇಶಕ ಅನುರಾಗ್ ಬಸು, ಬಾಲಿವುಡ್‌ನ ಖ್ಯಾತ ಗಾಯಕ– ನಟ ಕಿಶೋರ್ ಕುಮಾರ್‌ನ ಜೀವನ ಚರಿತ್ರೆ ಆಧರಿಸಿ ನಿರ್ದೇಶಿಸಲಿರುವ ಹೊಸ ಚಿತ್ರಕ್ಕೆ ನಾಯಕನಾಗಿ ರಣಬೀರ್ ಆಯ್ಕೆಯಾಗಿದ್ದಾನೆ. ಕಿಶೋರ್ ಕುಮಾರ್ ಜೀವನ ಸಿನಿಮಾದ ಕಥೆಯಂತೆಯೇ ಇದೆ. ಹಿಂದಿ, ಬಂಗಾಳಿ, ಮರಾಠಿ, ಅಸ್ಸಾಮಿ, ಗುಜರಾತಿ, ಕನ್ನಡ, ಭೋಜ್‌ಪುರಿ, ಮಲಯಾಳಂ ಮುಂತಾಗಿ ಹಲವಾರು ಭಾಷೆಗಳಲ್ಲಿ ಹಾಡಿರುವ ಕಿಶೋರ್ ದಾ, ನಿಜ ಜೀವನದಲ್ಲಿ ನಾಲ್ವರು ನಟಿಯರನ್ನು ಸಂಭಾಳಿಸಿದಾತ. ಮೊದಲು ರುಮಾ ಘೋಷ್, ಬಳಿಕ ಕ್ರಮವಾಗಿ ಮಧುಬಾಲ, ಯೋಗಿತಾಬಾಲಿ ಮತ್ತು ಲೀನಾ ಚಂದಾವರ್ಕರ್ ಜತೆಗೆ ಸಂಸಾರ ನಡೆಸಿದ ಕಿಶೋರ್ ದಾ ಜೀವನಕಥೆ ಅತ್ಯಂತ ರೋಚಕ ಎನ್ನುವುದೂ ನಿಜ. ಅಂದ ಹಾಗೆ ಮಧುಬಾಲ ಪಾತ್ರಕ್ಕೆ ಕತ್ರೀನಾ ಕೈಫ್ ಆಯ್ಕೆಯಾಗುವ ಸಾಧ್ಯತೆ ಇದೆ ಎನ್ನುವ ಗಾಳಿ ಸುದ್ದಿಯೂ ಹಬ್ಬಿದೆ.

■ ಬಿಂದು

